**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **18.09.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರರ ಪರಃ ಶ್ರೀ ವಕೀಲರಿಂದ:**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಆ ದಿನ ಚಾಲನೆ ಮಾಡುತ್ತಿದ್ದ ಬೈಕು ನನಗೆ ಸೇರಿದ್ದಾಗಿರುತ್ತದೆ. ನನ್ನ ಬೈಕಿಗೆ ಸದರಿ ಕಾಲಕ್ಕೆ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿ. ನನಗೆ ಬೈಕನ್ನು ಚಾಲನೆ ಮಾಡಲು ಡಿ.ಎಲ್. ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಡಿ.ಎಲ್ ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಡಿ.ಎಲ್. ಇಲ್ಲದ ಕಾರಣ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮುಖ ಮುಖಿ ಬೈಕುಗಳು ಡಿಕ್ಕಿ ಆಗಿದೆ ಎಂದರೆ ಹಿಂದುಗಡೆಯಿಂದ ಬಂದು ಡಿಕ್ಕಿಪಡಿಸಿರುತ್ತದೆ. ನಾನು ಜ್ಯೋಗಿಪುರದಿಂದ ಹಲಗೂರಿಗೆ ಆ ದಿನ ಹೋಗುತ್ತಿದ್ದೆ. ನನ್ನ ಬೈಕಿಗೆ ಹಿಂಭಾಗದಲ್ಲಿ ಜಖಂ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿರುತ್ತದೆ ಎಂದು ಹೇಳುವ ಬೈಕಿನವರು ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ನಾನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬೈಕಿಗೆ ವಿಮೆ ಇಲ್ಲದ ಕಾರಣ ಮತ್ತು ನನಗೆ ಡಿ.ಎಲ್ ಇಲ್ಲದ ಕಾರಣ ಈ ಬೈಕು ಅಪಘಾತಪಡಿಸಿರುತ್ತದೆ ಎಂದು ಅವರು ಪರಿಚಯಸ್ಥರಾದ ಕಾರಣ ಅವರ ಜೊತೆ ಸೇರಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನಗೆ ಪ್ರಜ್ಞೆ ಇತ್ತು. ಎದುರು ಬೈಕಿನವರಿಗೆ ಪೆಟ್ಟಾಗಿರಲಿಲ್ಲ. ನನಗೆ ಹೇಗೆ ಗಾಯಗಳು ಆಗಿವೆ ಎಂದು ಮಳವಳ್ಳಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಹೇಳಿ ಬರೆಸಿರುತ್ತೇನೆ.

ಮಂಡ್ಯ ಆಸ್ಪತ್ರೆಯಿಂದ ಮೈಸೂರಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. 1ರಿಂದ 5ನೇ ತಾರೀಖಿನವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ನಾನು ಮಂಡ್ಯದಲ್ಲಿ ಒಂದು ದಿನ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ. ಈ ಸಂಬಂದವಾಗಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೈಸೂರಿನ ಆಸ್ಪತ್ರೆಯಲ್ಲಿ ನನ್ನ ಎಡಗಾಲಿಗೆ ಮತ್ತು ಹಲ್ಲಿಗೆ ಶಸ್ತ್ರ ಚಿಕಿತ್ಸೆ ಆಗಿರುತ್ತದೆ. ಮಳವಳ್ಳಿ ಆಸ್ಪತ್ರೆಯಲ್ಲಿ ಹಲ್ಲಿಗೆ ಸಂಬಂದಪಟ್ಟಂತೆ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಹಲ್ಲು ಮುರಿದಿರಲಿಲ್ಲ ಎಂದರೆ ಸರಿಯಲ್ಲ. ನಾನು ಮಳವಳ್ಳಿ ಆಸ್ಪತ್ರೆಯ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಿದ್ಯಾರಣ್ಯ ಆಸ್ಪತ್ರೆಯಲ್ಲಿ 1

ರಿಂದ 5 ನೇ ದಿನಾಂಕದವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ನಿಪಿ-9 ನ್ನು ಸೃಷ್ಟಿ ಮಾಡಿದ್ದು, ವೈದ್ಯರು ಸಲಹಾ ಚೀಟಿಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-9 ಬಿಲ್ಲುಗಳಲ್ಲಿ ಕೆಲವು ಬಿಲ್ಲುಗಳಿಗೆ ಸಹಿ ಮತ್ತು ಮೊಹರು ಇಲ್ಲ ಎಂದರೆ ಸರಿಯಲ್ಲ.  ನಾನು ಮೊದಲು ವ್ಯವಸಾಯ ಮಾಡುತ್ತಿದ್ದು, ಈಗ ಮೊದಲಿನಂತೆ ವ್ಯವಸಾಯ ಮಾಡಲು ಅಗುತ್ತಿಲ್ಲ. ನಿಪಿ-11 ದಾಖಲೆಯು ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನಲ್ಲಿ ತೆಂಗು, ರೇಷ್ಮೆ ಮತ್ತು ಭತ್ತ ಬೆಳೆಯುತ್ತಿದ್ದೇವು ಈಗ ಅಗುತ್ತಿಲ್ಲ. ಅದು ಸುಮಾರು 5 ರಿಂದ ಐದೂವರೆ ಎಕರೆ ಇರುತ್ತದೆ. ತೆಂಗು 3 ತಲೆಮಾರಿಗೆ ಸಂಬಂದಿಸಿದಂತೆ ಅದಾಯ ಕೊಡುತ್ತಿದ್ದು ಅದರೂ ಅದಾಯ ಇಲ್ಲ ಎಂದು ಹೆಚ್ಚಿ ನ ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ 50 ಸಾವಿರ ರೂಪಾಯಿ ಅದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿರುವುದರಿಂದ ಅದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಿಪಿ-12 ರ ರಶೀತಿಗಳು ನನ್ನ ಹೆಸರಿನಲ್ಲಿ ಇರುತ್ತವೆ. ಅಪಘಾತವಾದ ನಂತರದ ಬಿಲ್ಲುಗಳು ನಿಪಿ-12  ಎಂದರೆ ಸರಿಯಲ್ಲ. ರೇಷ್ಮ ಇಲಾಖೆಯವರ ಜೊತೆ ಸೇರಿ ನಿಪಿ-12 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ದೂರನ್ನು ನನ್ನ ತಮ್ಮ ನೀಡಿರುತ್ತಾರೆ. ಮೈಸೂರಿನ ಅಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರು ಶ್ರೀನಿವಾಸ್ ಮೂರ್ತಿ ಅಗಿರುತ್ತಾರೆ. ನಾನು ಅಸ್ಪತ್ರೆಯಲ್ಲಿ ಇದ್ದ ಕಾರಣ 4 ದಿನಗಳ  ವಿಳಂಬವಾಗಿ ದೂರು ಕೊಟ್ಟಿರುತ್ತೇನೆ. ನನ್ನ ತಪ್ಪಿ ನಿಂದ ಅಪಘಾತ ಅಗಿದ್ದ ಕಾರಣ ಪೋಲೀಸರ ಜೊತೆ ಸೇರಿ ದೂರನ್ನು ಸೃಷ್ಟಿ ಮಾಡಿ ವಿಳಂಬವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎದುರು ಬೈಕಿನವರಿಗೆ ಪೆಟ್ಟಾಗಿಲ್ಲ ಮತ್ತು ಅವರ  ಬೈಕಿಗೆ ಜಖಂ ಅಗಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಪ್ಪಿ ನಿಂದ ಬಿದ್ದು ಗಾಯ ಮಾಡಿಕೊಂಡಿರುವುದರಿಂದ 2ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ ಶಸ್ತ್ರ ಚಿಕಿತ್ಸೆ ಅಗಿಲ್ಲ ತರಚಿದ ಗಾಯ ಅಗಿತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ